ಮೂರೇಜನ... ನಾನೇ ಗಡಿಯಾರದ ಜೊತೆ ಓಡುತ್ತೀನೋ ಗಡಿಯಾರವೇ ನನ್ನನ್ನು ಎಳೆದುಕೊಂಡು ಓಡುತ್ತದೋ ಗೊತ್ತಿಲ್ಲ! ಒಟ್ಟಿನಲ್ಲಿ ಊಟ ಮುಗಿಸಿ ಅತ್ತೆಮ್ಮ ಮತ್ತು ಅವರ ಮಗನನ್ನು ಅವರ ಪಾಡಿಗೆ ಬಿಟ್ಟು ನನ್ನ ರೂಮು ಸೇರಿ ಆಹಾ ನನ್ನದೇ ಆದ 'ಸ್ಪೇಸ್'ನ ಸ್ವರ್ಗಾನಂದ ಅನುಭವಿಸಲು, ಹಾಸಿಗೆಗೆ ಬೆನ್ನುಕೊಟ್ಟು ಇನ್ನೇನು ಜೊಂಪು ಹತ್ತಬೇಕು ಅನ್ನುವಾಗಲೇ...

ಕಿರ್ ಕಿರ್ರರ್ ಪೊಂ ಪೋಂ

ಕಿರ್ ಕಿರ್ರರ್ ಪೊಂ ಪೋಂ

ಎಡೆಬಿಡದೆ ಮರುಕಳಿಸುವ ಕರ್ಕಶ ಸದ್ದಿಗೆ ನನ್ನ ನಿದ್ರಾ ಭಂಗವಾಗಲು ಮೂಲ ಹೇತು ಯಾವುದೆಂದರೆ ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ ಅಂತ ಪ್ರಾಥಮಿಕ ಶಾಲೆಯಲ್ಲಿ ನಮಗೆಲ್ಲಾ ಬಾಯಿಪಾಠವಾಗಿದ್ದ ಪದ್ಯದ ಹೀರೋಗಳಾದ ಈ ಹರಿ ಹರೀ ಗೋವುಗಳು!

ಕೇವಲ ಹತ್ತು ವರ್ಷಗಳ ಹಿಂದೆ ನಿವೃತ್ತರ ಸ್ವರ್ಗವೆನಿಸಿದ ಮೈಸೂರಿನ ಈ ಸುಂದರ ಪರಿಸರದಲ್ಲಿ ಮನೆ ಕೊಂಡಾಗ ಸಾಲು ಮರದ ತಿಮ್ಮಕ್ಕನಂತಲ್ಲದಿದ್ದರೂ ಮನೆ ಮುಂದೆ ತಂಪಾಗಿರಲಿ ಅನ್ನುವ ಉದ್ದೇಶದಿಂದ ನಾಲ್ಕೈದು ಮರಗಳನ್ನು ಬೆಳೆಸಿದ್ದೇ ಇವತ್ತಿನ ಈ ನಮ್ಮ ಪರಿಪಾಟಲಿಗೆ ಕಾರಣ ಅಂದರೆ ನಿಮಗೆಲ್ಲ ಅಚ್ಚರಿ ಅನಿಸಬಹುದು! ಸಿಟಿಯ ಸೆರಗಿನ ಹಳ್ಳಿಯಂಚಿನ ಹೊಲ ಕೆರೆಗಳೆಲ್ಲ ಬಡಾವಣೆಗಳಾಗಿ, ಬಡಾವಣೆಗಳೆಲ್ಲ ಕಾಂಕ್ರೀಟ್ ಕಾಡಾಗಿ ಪರಿವರ್ತನೆಗೊಂಡರೆ ಪಾಪ ಜಮೀನು ಕಳಕೊಂಡ ಗೋಪಾಲಕರು ತಾನೇ ಏನು ಮಾಡಿಯಾರು? ನಮ್ಮ ಪುಣ್ಯಕೋಟಿ ಕತೆಯ ಕಾಳಿಂಗ ಗೊಲ್ಲನಂತೆ 'ಹುಲ್ಲು ನೀರಿನ ಸ್ಥಳವ ನೋಡಿ ಅಲ್ಲಿ ಹುಲ್ಲನು ಮೆದ್ದು ನೀವು' ಅಂತ ಅನುನಯಿಸಿ ಹೇಳಲಾರದ ಅವರೆಲ್ಲ ಅಷ್ಟೋ ಇಷ್ಟೋ ಹೊಟ್ಟೆಗೆ ಹಾಕಿ, ಹಾಲು ಕರೆದು, ಬೆಳಗಿನ ಸುಮಾರು ಎಂಟು ಗಂಟೆಯ ಹೊತ್ತಿಗೆ ಕೊಟ್ಟಿಗೆಯ ಹಿರಿ ಕಿರಿ ರಾಸುಗಳನ್ನೆಲ್ಲಾ ಹೊರಗೆ ಅಟ್ಟಿ 'ಬಡ್‌ಬಡಾವಣೆಯನೆಲ್ಲ ಸುತ್ತಿ ಜನರ ಭಕ್ತಿಯ ಗೆಲ್ಲಿರಿ' ಅಂತ ಹರಸಿಬಿಟ್ಟರೆ ಇನ್ನು ಸಂಜೆಯ ತನಕ ಅವುಗಳ ಉಸಾಬರಿ ಆ ಗೋಪಾಲಕರಿಗೆ ಸೇರಿದ್ದಲ್ಲ!

ಇಂತಿಪ್ಪ ರಾಸುಗಳು ಬಡಾವಣೆಗಳನ್ನೆಲ್ಲ ಸುತ್ತಿ ಅಲ್ಲಲ್ಲಿ ಅಳಿದುಳಿದ ಖಾಲಿ ಸೈಟಿನಲ್ಲಿರುವ ಗಿಡಗಂಟಿ ಸೊಪ್ಪುಸದೆಗಳನ್ನು ತಿನ್ನುತ್ತಾ, ಬೇಸಿಗೆಯ ಸುಡುಬಿಸಿಲಲ್ಲಿ ಯಾವುದೇ ಮೇವು ಸಿಗದಿದ್ದಾಗ ರಸ್ತೆಬದಿ ಸಿಕ್ಕಿದ ಹಾಳುಮೂಳನ್ನೆಲ್ಲ ಸ್ವಾಹಾ ಮಾಡುತ್ತ ಅಡ್ಡಾಡುತ್ತಿದ್ದರೆ ಆಹಾ ಈ ನಮ್ಮ ಜನರು ಮೂವತ್ತಮೂರೂ ಕೋಟಿ ದೇವತೆಗಳು ಅನಾಯಾಸವಾಗಿ ಮನೆ ಮುಂದೆ ಪ್ರತ್ಯಕ್ಷವಾದರಲ್ಲ ಅನ್ನುವ ಭಕ್ತಿಯಲ್ಲಿ ಹಸಿರು ಕಸವನ್ನೆಲ್ಲ ಅವುಗಳ ಮುಂದೆ ಸುರಿದು ಧನ್ಯರಾಗುತ್ತಾರೆ; ಮಾತ್ರವಲ್ಲ, ಹಬ್ಬ ಹರಿದಿನಗಳಲ್ಲಿ ಧಾನ್ಯ, ಹಣ್ಣುಗಳ ವಿಶೇಷ ಆತಿಥ್ಯದೊಂದಿಗೆ ಅರಿಸಿನ ಕುಂಕುಮ ಹಚ್ಚಿ ಹೆಚ್ಚುವರಿ ಪುಣ್ಯವನ್ನೂ ತಮ್ಮ ಖಾತೆಗೆ ಜಮಾ ಮಾಡಿಕೊಳ್ಳುತ್ತಾರೆ.

ಹೀಗೆ ನಿರ್ದಿಷ್ಟ ರಾಸುಗಳು ನಿರ್ದಿಷ್ಟ ಮನೆಗಳ ವರ್ತನೆಯನ್ನು ಮುಗಿಸಿಕೊಂಡು ಬಂದು ಮಧ್ಯಾಹ್ನದ ವಿರಾಮವನ್ನು ಕಳೆಯುವುದು ಮಾತ್ರ ನಮ್ಮ ಮನೆ ಮುಂದಿನ ಈ ತಂಪಾದ ನೆರಳಿನಲ್ಲೇ! ಸಿಟಿಯಾದರೇನು ಶಿವಾ, ರೋಡಾದರೇನು ಶಿವಾ ಅಂತ ಬಾಯಾಡಿಸುತ್ತಾ ಮಲಗುವ ಈ ಸೀಮೆ ಹಸುಗಳ ಚಿತ್ರ ತೆಗೆದು ಅಮೆರಿಕದಲ್ಲಿರುವ ಇಬ್ಬರು ಸುಪುತ್ರಿಯರಿಗೆ ಕಳಿಸಿದ್ದಕ್ಕೆ, ಹಿರಿಯವಳು 'ಅಷ್ಟು ವರ್ಷದಿಂದ ಮನೆಗೆ ಹೆಸರೇನಿಡುವುದು ಅಂತ ತಲೆ